ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಬಾಂಗ್ಲಾ ಭೂ ಕುಸಿತ : ಸಾವಿನ ಸಂಖ್ಯೆ 152ಕ್ಕೆ ಏರಿಕೆ

ಬಾಂಗ್ಲಾ ದೇಶದಲ್ಲಿ ಮಹಾ ಮಳೆಯಿಂದಾಗಿ ಸಂಭವಿಸಿದ ಭೂ ಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 152ಕ್ಕೆ ಏರಿಕೆಯಾಗಿದೆ. ಬಾಂಗ್ಲಾ ದೇಶದ ಚಿತ್ತಗಾಂಗ್, ರಂಗಮಟಿ ಮತ್ತು ಬಂದಾರ್ ಬನ್‌ನಲ್ಲಿ ಕಳೆದ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಭೂಕುಸಿತ ಸಂಭವಿಸಿದ್ದು, ಈ ಭಾಗದಲ್ಲಿ ಅತೀ ಹೆಚ್ಚು ಜನರು ಮೃತಪಟ್ಟಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

'ವಿದೇಶಿಯರಿಗೆ ಭಗವದ್ಗೀತೆ,ರಾಮಾಯಣ ಗ್ರಂಥ ನೀಡಿ'

ವಿದೇಶಿ ಪ್ರತಿನಿಧಿಗಳು ಭಾರತಕ್ಕೆ ಭೇಟಿ ನೀಡಿದಾಗ ಅವರಿಗೆ ತಾಜ್‌ಮಹಲ್ ಪ್ರತಿಕೃತಿಯನ್ನು ಉಡುಗೊರೆಯಾಗಿ ನೀಡುವ ಬದಲು ಭಗವದ್ಗೀತೆ, ರಾಮಾಯಣ ಗ್ರಂಥಗಳನ್ನು ನೀಡಿ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ ಯೋಗಿ ಹೇಳಿದ್ದಾರೆ. ಪ್ರಧಾನಿ ಮೋದಿ ಅವರು ವಿದೇಶ ಪ್ರವಾಸ ಹೋದಾಗ ಅಥವಾ ಬೇರೆ ರಾಷ್ಟ್ರದ ಪ್ರತಿನಿಧಿಗಳು ಭಾರತಕ್ಕೆ ಭೇಟಿ ನೀಡಿದಾಗ ಭಗವದ್ಗೀತೆ,ರಾಮಾಯಣವನ್ನೇ ಉಡುಗೊರೆಯಾಗಿ ನೀಡುತ್ತಾರೆ ಎಂದಿದ್ದಾರೆ.

ರಾಷ್ಟ್ರಪತಿ ಚುನಾವಣೆ: ಸೋನಿಯಾ ಭೇಟಿ ಮಾಡಿದ ರಾಜನಾಥ್ ಸಿಂಗ್

ಜುಲೈ 17ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆ ಸಂಬಂಧ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ನಡುವೆ ಶುಕ್ರವಾರ ಮೊದಲ ಸಭೆ ನಡೆದಿದ್ದು, ಎರಡೂ ಕಡೆಯಿಂದ ಯಾವುದೇ ಹೆಸರನ್ನು ಪ್ರಸ್ತಾಪಿಸದೆ ಸಭೆ ಅನಿಶ್ಚಿತವಾಗಿ ಮುಕ್ತಾಯವಾಗಿದೆ. ಈ ಸಂಬಂಧ ಕೇಂದ್ರ ಸಚಿವ ರಾಜನಾಥ್ ಸಿಂಗ್ ಮತ್ತು ಎಂ.ವೆಂಕಯ್ಯ ನಾಯ್ಡು ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿದ್ದು, ಅಭ್ಯರ್ಥಿ ಆಯ್ಕೆ ಕುರಿತು ಚರ್ಚಿಸಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :220 ಶನಿವಾರ ಜೂ.17, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ವಿಧಾನಸಭೆ ಚುನಾವಣೆ: ಹೊಂದಾಣಿಕೆ ಇಲ್ಲ

ಹಾಸನ : ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಭಾರತೀಯ ಜನತಾಪಕ್ಷ ಏಕಾಂಗಿಯಾಗಿ ಸ್ಪರ್ಧಿಸಲಿದೆ. ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಿಗೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಯಾವುದೇ ಪಕ್ಷದೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಚುನಾವಣೆ ಮುನ್ನ ಇತರೆ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಕುರಿತು ಈವರೆವಿಗೂ ಚಿಂತನೆ ನಡೆಸಿಲ್ಲ. ಅಂತಹ ಪ್ರಯತ್ನ ಇರುವುದಿಲ್ಲ ಎಂದು ಶುಕ್ರವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ವಿಧಾನ ಪರಿಷತ್ ಸಭಾಪತಿ ಆಯ್ಕೆ ಚುನಾವಣೆಯಲ್ಲಿ ದಳ(ಎಸ್) ತಮ್ಮ ಪಕ್ಷಕ್ಕೆ ಬೆಂಬಲ ನೀಡಿದೆ. ಹಾಗೆಂದ ಮಾತ್ರಕ್ಕೆ ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿಯೂ ಮೈತ್ರಿ ಇರುವುದಿಲ್ಲ. ಇದು ಸಭಾಪತಿ ಆಯ್ಕೆಗೆ ಮಾತ್ರ ಸಂಬಂಧಿಸಿದ ವಿಚಾರ ಎಂದು ಸ್ಪಷ್ಟಪಡಿಸಿದರು.

ಬರಗಾಲದಿಂದಾಗಿ ರೈತರು ಕಂಗೆಟ್ಟಿದ್ದಾರೆ. ಕೂಡಲೇ ಸರ್ಕಾರ ಅವರ ಸಾಲವನ್ನು ಮನ್ನಾ ಮಾಡಬೇಕು. ಇಲ್ಲದಿದ್ದಲ್ಲಿ ಜುಲೈ 7,8,9ರಂದು ಬೆಂಗಳೂರಿನಲ್ಲಿ ಪ್ರತಿಭಟನಾ ಧರಣಿ ನಡೆಸಲಾಗುವುದು. ನಮ್ಮ ಸರ್ಕಾರಗಳಿರುವ ರಾಜ್ಯಗಳಾದ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಸಾಲ ಮನ್ನಾ ಮಾಡಲಾಗಿದೆ. ಅದೇ ರೀತಿ ಇಲ್ಲಿ ಏಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು.

(-4ನೇ ಪುಟಕ್ಕೆ)

ನೂಕು ನುಗ್ಗಲು -ಹೂವಿನ ಕುಂಡ ಧ್ವಂಸ

ನೂಕು ನುಗ್ಗಲು, ಹೂವಿನ ಕುಂಡ ಧ್ವಂಸ... ನಗರದ ಅಶೋಕ ಹೋಟೆಲ್ ಬಳಿ ಶುಕ್ರವಾರ ಬೆಳಿಗ್ಗೆ 10 ಗಂಟೆ ವೇಳೆಯಲ್ಲಿ ನೂಕು ನುಗ್ಗಲು ಉಂಟಾಯಿತು. ಯಡಿಯೂರಪ್ಪ ಹೊರಬರುತ್ತಿದ್ದಂತೆಯೇ ಪಕ್ಷದ ಕಾರ್ಯಕರ್ತರು ಶಿಳ್ಳೆ ಹಾಕಿ ಘೋಷಣೆ ಕೂಗಿದರು.

ಯಡಿಯೂರಪ್ಪ ಅವರ ಬಳಿ ಬರಲು ನೂಕು ನುಗ್ಗಲೇ ಉಂಟಾಯಿತು. ಯಡಿಯೂರಪ್ಪ ಹೊರ ಬರುತ್ತಿದ್ದಾಗ ಒಂದೇ ಸಮನೆ ಕಾರ್ಯಕರ್ತರು ನುಗ್ಗಿದ್ದರಿಂದ ಹೂವಿನ ಕುಂಡವೇ ಧ್ವಂಸವಾಯಿತು.

ಹೇಳಿ ಕೇಳಿ ಮುಂದಿನ ವರ್ಷ ವಿಧಾನಸಭೆ ಚುನಾವಣೆ ಎದುರಾಗಲಿದೆ. ಇದಕ್ಕಾಗಿ ಆಕಾಂಕ್ಷಿಗಳು ಈಗಲೇ ತಯಾರಿ ನಡೆಸಿರುವಂತಿದೆ. ತಮ್ಮ ಬೆಂಬಲಿಗರನ್ನು ಕರೆತಂದು ಯಡಿಯೂರಪ್ಪ ಎದುರು ಅವರು ಬಲಾಬಲವನ್ನು ಪ್ರದರ್ಶಿಸಿದರು.

ಜಿಲ್ಲೆಯ ಹಲವು ಭಾಗಗಳಿಂದ ಮುಖಂಡರು ಕೂಡ ಆಗಮಿಸಿದ್ದರು. ಮಾಜಿ ಶಾಸಕ ಬಿ.ವಿ.ಕರೀಗೌಡ, ಗಂಗಾಧರ್ ಸೇರಿದಂತೆ ಹಲವು ಮುಖಂಡರು ನೆರೆದಿದ್ದರು.

ಬಿ.ಎಸ್.ಯಡಿಯೂರಪ್ಪ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿಯೂ ಗರಂ ಆಗಿದ್ದರು. ನಿನ್ನೆಯಿಂದಲೇ ಅವರಿಗೆ ಪಕ್ಷದ ಮುಖಂಡರುಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದೇ ದೊಡ್ಡ ಸಮಸ್ಯೆಯಾಗಿದೆ ಕಾಡಿತು ಎಂದು ಹೆಸರು ಹೇಳಲಿಚ್ಛಿಸದ ಪಕ್ಷದ ಮುಖಂಡರೊಬ್ಬರು ಜನತಾಮಾಧ್ಯಮ ಪತ್ರಿಕೆಗೆ ತಿಳಿಸಿದರು.

ಜೈಕಾರ, ಘೋಷಣೆ ಇತ್ಯಾದಿ...

ಜೈಕಾರ, ಘೋಷಣೆ, ಗೊಂದಲ, ಗದ್ದಲ ಒಂದೇ ಎರಡೇ! ನಗರದ ಅಶೋಕ ಹೋಟೆಲ್‌ನಲ್ಲಿ ಗುರುವಾರ ರಾತ್ರಿಯಿಂದಲೇ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ತಂಗಿದ್ದರು.

ಯಡಿಯೂರಪ್ಪ ಆಗಮನದ ಹಿನ್ನೆಲೆಯಲ್ಲಿ ನೂರಾರು ಕಾರ್ಯಕರ್ತರು ಅಲ್ಲಿ ನೆರೆದಿದ್ದರು. ಶುಕ್ರವಾರ ಬೆಳಿಗ್ಗೆಯ ಹೊತ್ತಿಗೆ ಆ ಸಂಖ್ಯೆ ಮತ್ತಷ್ಟು ಜಾಸ್ತಿಯಾಯಿತು. ಪತ್ರಿಕಾಗೋಷ್ಠಿ ಮುಗಿಸಿ ಹೋಟೆಲ್‌ನಿಂದ ಹೊರಬರುವಾಗ ಪಕ್ಷದ ಮುಖಂಡರುಗಳ ಪರ ಘೋಷಣೆಗಳು ಮುಗಿಲು ಮುಟ್ಟಿದವು. ಟಿಕೆಟ್ ಆಕಾಂಕ್ಷಿಗಳು ತಮ್ಮ ಬೆಂಬಲಿಗರೊಂದಿಗೆ ಬಂದಿದ್ದರು.

ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ

ಪತ್ರಿಕಾಗೋಷ್ಠಿ ಮುಗಿಸಿ ಹೊರಬಂದ ಯಡಿಯೂರಪ್ಪ ಅವರಿಗೆ ಕಾರ್ಯಕರ್ತರು ಸಂಭ್ರಮದಿಂದ ಬರಮಾಡಿಕೊಂಡರು. ಬಿ.ಎಂ.ರಸ್ತೆಯಲ್ಲಿ ಅರ್ಧ ಗಂಟೆಗೂ ಹೆಚ್ಚು ಹೊತ್ತು ವಾಹನ ಸಂಚಾರಕ್ಕೆ ಅಡಚಣೆಯಾಯಿತು. ನೂರಕ್ಕೂ ಹೆಚ್ಚು ಬೈಕ್‌ಗಳು ಇಲ್ಲಿದ್ದವು. ಹತ್ತಾರು ವಾಹನಗಳು ರಸ್ತೆಬದಿ ನಿಂತಿದ್ದವು.

ಇದರ ನಡುವೆಯೇ ಯಡಿಯೂರಪ್ಪ ಅವರನ್ನು ಜಿಲ್ಲಾಧಿಕಾರಿಗಳ ಕಛೇರಿ ಆವರಣಕ್ಕೆ ಕರೆತಂದು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆಮಾಡಿಸಲಾಯಿತು.

ಮೆರವಣಿಗೆಗೆ ಮೆರುಗು ನೀಡಿದ ಬೈಕ್ ರ‍್ಯಾಲಿ

ಜಿಲ್ಲಾಧಿಕಾರಿ ಕಛೇರಿಯಿಂದ ತಟ್ಟೇಕೆರೆ ಗ್ರಾಮದವರೆಗೂ ಬೈಕ್ ರ‍್ಯಾಲಿ ಸಾಗಿತು. ಬೈಕ್ ರ‍್ಯಾಲಿ ಮೆರವಣಿಗೆಗೆ ಮೆರುಗು ಕೂಡ ನೀಡಿತು.

ಯುವಕರ ದಂಡು ಬೈಕ್‌ಗಳ ಮೇಲೆ ಕುಳಿತು ಭಾರತೀಯ ಜನತಾ ಪಕ್ಷದ ಬಾವುಟಗಳನ್ನು ಹಾಕಿಕೊಂಡು ಜೈಕಾರ ಹಾಕುತ್ತಿದ್ದರು. ನಂತರ ನಗರದ ಪ್ರಮುಖ ಬೀದಿಗಳಲ್ಲಿ ಈ ರ‍್ಯಾಲಿ ಮುಂದುವರೆಯಿತು. ಬೈಕ್ ರ‍್ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರೇ ಇದ್ದುದು ಕಂಡು ಬಂತು.

▯ ಎಂ.ಕಾಂ ವಿದ್ಯಾರ್ಥಿನಿ ಅಪಹರಣ ಪ್ರಕರಣ

ಆರೋಪಿ ಮೋಹನ್ ಸೇರಿದಂತೆ ಮೂವರ ಬಂಧನ

ಹೊಳೆನರಸೀಪುರ : ತಾಲ್ಲೂಕಿನ ಪಡುವಲಹಿಪ್ಪೆಯ ಶ್ರೀ ಹೆಚ್.ಡಿ.ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎಂ.ಕಾಂ ವಿದ್ಯಾರ್ಥಿನಿ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಮೋಹನ ಸೇರಿದಂತೆ ಮೂವರು ಆರೋಪಿಗಳನ್ನು ಸ್ಥಳೀಯ ಪೊಲೀಸರು ಮಂಡ್ಯ ನಗರದಲ್ಲಿ ಬಂಧಿಸಿ ವಿದ್ಯಾರ್ಥಿನಿಯನ್ನು ರಕ್ಷಿಸಿದ್ದಾರೆ.

ಕಳೆದ ಜೂನ್ 12ರ ಸೋಮವಾರದಂದು ಪರೀಕ್ಷೆ ಮುಗಿಸಿ ಕಾಲೇಜಿನ ಗೇಟ್ ಮುಂಭಾಗ ನಿಂತಿದ್ದ ವಿದ್ಯಾರ್ಥಿನಿ ಶ್ವೇತ(21) ಳನ್ನು ಬಿಳಿ ಬಣ್ಣದ ಸ್ವಿಫ್ಟ್ ಕಾರಿನಲ್ಲಿ (ಕೆ.ಎ.13 ಎನ್.5815) ಬಂದ ಯುವಕರ ಗುಂಪು ಚಾಕು ಚೂರಿಯಿಂದ ಬೆದರಿಸಿ ಕಾರಿನಲ್ಲಿ ಅಪಹರಿಸಿಕೊಂಡು ಹೋಗಿದ್ದರು. ವಿದ್ಯಾರ್ಥಿನಿಯನ್ನು ಸಿನಿಮೀಯ ರೀತಿಯಲ್ಲಿ ಅಪಹರಣ ಮಾಡಿದ್ದು ಜಿಲ್ಲೆಯಲ್ಲಿ ದೊಡ್ಡ ಸುದ್ದಿಯಾಗಿತ್ತು. ವಿದ್ಯಾರ್ಥಿನಿಯ ಪೋಷಕರು ಗ್ರಾಮಾಂತರ ಠಾಣೆಯಲ್ಲಿ ಈ ಕುರಿತು ದೂರು ದಾಖಲಿಸಿದ್ದರು.

ಆರೋಪಿಗಳ ಪತ್ತೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಸ್ಥಳೀಯ ಪಿ.ಎಸ್.ಐ.ಗಳು ಸೇರಿದಂತೆ ಜಿಲ್ಲೆಯ ವಿವಿಧ ಠಾಣೆಗಳ ಸಬ್ ಇನ್ಸ್‌ಪೆಕ್ಟರ್, ಸಿಬ್ಬಂದಿಗಳನ್ನೊಳಗೊಂಡಂತೆ ಮೂರು ತಂಡಗಳನ್ನು ರಚಿಸಲಾಗಿತ್ತು. ಮಡಿಕೇರಿ, ಮಂಗಳೂರು, ಹಾಗೂ ಬೇಲೂರು, ಸಕಲೇಶಪುರಕ್ಕೆ ಪ್ರತ್ಯೇಕ ತಂಡಗಳನ್ನು ನಿಯೋಜಿಸಲಾಗಿತ್ತು. ಪತ್ತೆ ಕಾರ್ಯದಲ್ಲಿ ತೊಡಗಿದ್ದ ಸ್ಥಳೀಯ ತಂಡದ ನಗರ ಠಾಣೆ ಪಿ.ಎಸ್.ಐ. ಮೋಹನ ಕೃಷ್ಣ ಮತ್ತು ಹಾಸನ ಸಂಚಾರಿ ಪಿ.ಎಸ್.ಐ. ವಿಜಯಕೃಷ್ಣ ಮತ್ತು ತಂಡಕ್ಕೆ ಆರೋಪಿಗಳು ಮಡಿಕೇರಿಯಲ್ಲಿರುವ ಬಗ್ಗೆ ಮೊದಲು ಖಚಿತ ಮಾಹಿತಿ ಸಿಕ್ಕಿತ್ತು. ಈ ಮೇರೆಗೆ ಮಡಿಕೇರಿಗೆ ತೆರಳಿ ಮಾಹಿತಿ ಕಲೆ ಹಾಕಿದಾಗ ಆರೋಪಿ ಮೋಹನ ತನ್ನ ಸ್ವಿಫ್ಟ್ ಕಾರನ್ನು ಮಡಿಕೇರಿ ಜಿಲ್ಲೆಯ ನಾಪೋಕ್ಲುವಿನ ಸಂಬಂಧಿಕರ ಮನೆಯ ಬಳಿ ಬಿಟ್ಟಿದ್ದ. ನಂತರ ಅಲ್ಲಿಗೆ ಬಂದಿದ್ದ ತನ್ನ ಅಣ್ಣ ಕುಮಾರ, ತಂಗಿಯ ಗಂಡ ಪ್ರಕಾಶ ಹಾಗೂ ಸಹಚರರೊಂದಿಗೆ ಯುವತಿಯನ್ನು ಬಾಡಿಗೆ ಕಾರು ಮಾಡಿಕೊಂಡು ಮಂಡ್ಯದಲ್ಲಿ ಕಾರಿನಲ್ಲಿ ಸುತ್ತಾಡಿದ್ದಾನೆ.

ಆರೋಪಿ ಮೋಹನ

ಆರೋಪಿಗಳು ಮಂಡ್ಯಕ್ಕೆ ಹೋಗುವ ಮಾಹಿತಿ ಪಡೆದ ಜಿಲ್ಲಾ ಪೊಲೀಸರ ತಂಡ, ಮಂಡ್ಯ ನಗರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿ, ಅಲ್ಲಿನ ಪೊಲೀಸರ ಜೊತೆಗೂಡಿ ಪಿ.ಇ.ಎಸ್. ಕಾಲೇಜು ಮುಂಭಾಗ ಆರೋಪಿಗಳ ಬಂಧನಕ್ಕೆ ಕಾದು ಕುಳಿತಿತ್ತು. ನಗರದ ಕಡೆಗೆ ಬರುವ ವಾಹನಗಳನ್ನು ನಿಲ್ಲಿಸಿ ತಪಾಸಣೆ ನಡೆಸುವ ಸಂದರ್ಭ ಗುರುವಾರ ಸಂಜೆ ವೇಳೆಗೆ ವಿದ್ಯಾರ್ಥಿನಿಯೊಂದಿಗೆ ಮಂಡ್ಯ ಪ್ರವೇಶಿಸುತ್ತಿದ್ದ ಅಪಹರಣಕಾರರಿದ್ದ ಕಾರಿನ ಸುಳಿವು ಪತ್ತೆಯಾಗಿದೆ. ವಾಹನಗಳ ತಪಾಸಣೆ ನಡೆಸುತ್ತಿದ್ದ ಪೊಲೀಸರನ್ನು ಕಂಡು ಕಾರಿನಲ್ಲಿದ್ದ ಪ್ರದೀಪ, ಶಶಿ ಮತ್ತು ಧರ್ಮ ಈ ಮೂವರು ಆರೋಪಿಗಳು ನೆಪ ಹೇಳಿ ಕಾರಿನಿಂದಿಳಿದು ಪರಾರಿಯಾದರೆ, ಕಾರಿನಲ್ಲಿದ್ದ ಆರೋಪಿ ಮೋಹನ, ಈತನ ಅಣ್ಣ ಕುಮಾರ, ಬಾವ ಪ್ರಕಾಶ ಈ ಮೂವರು ಸ್ಥಳೀಯ ಪೊಲೀಸರ ತಂಡಕ್ಕೆ ಸಿಕ್ಕಿ ಬಿದ್ದಿದ್ದಾರೆ. ನಂತರ ಈ ಆರೋಪಿಗಳನ್ನು ಠಾಣೆಗೆ ಕರೆತಂದು ವಿಚಾರಣೆಗೆ ಒಳಪಡಿಸಿದಾಗ ಅಪಹರಣದ ಹಿನ್ನೆಲೆಯನ್ನು ಬಾಯಿ ಬಿಟ್ಟಿದ್ದಾರೆ.

ಮೋಹನ ಮತ್ತು ಪ್ರಕಾಶ ಎಂಬಿಬ್ಬರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆ ಕಸ್ಟಡಿಗೆ ತರಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

▯ ಜೂ.12ರಂದು ಕಾಲೇಜು ಗೇಟ್ ಮುಂಭಾಗ ಅಪಹರಣ

▯ ಆರೋಪಿ ಪತ್ತೆಗೆ ಮೂರು ವಿವಿಧ ತಂಡಗಳ ರಚನೆ

▯ ಮಂಡ್ಯ ಬಳಿ ಆರೋಪಿಗಳ ಸೆರೆ

ಯಡಿಯೂರಪ್ಪ ಪ್ರಯಾಣಕ್ಕೆ ಅಡ್ಡಿ : ಬಿಗುವಿನ ವಾತಾವರಣ

ಅರಕಲಗೂಡು : ಜನಸಂಪರ್ಕ ಅಭಿಯಾನ ಮುಗಿಸಿ ಹಿಂದಿರುಗುತ್ತಿದ್ದ ವೇಳೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಅವರ ಕಾರನ್ನು ಬಿಜೆಪಿ ಭಿನ್ನಮತೀಯ ಕಾರ್ಯಕರ್ತರು ಕೆಲಕಾಲ ಅಡ್ಡಗಟ್ಟಿ ಅವರ ಪ್ರಯಾಣಕ್ಕೆ ಅಡ್ಡಿಪಡಿಸಿದ ಘಟನೆ ಶುಕ್ರವಾರ ಸಂಜೆ ನಡೆಯಿತು. ಈ ವೇಳೆ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ತಾಲ್ಲೂಕು ಬಿಜೆಪಿ ಘಟಕದಲ್ಲಿ ಕೆಲ ತಿಂಗಳುಗಳಿಂದ ಹೊಗೆಯಾಡುತ್ತಿದ್ದ ಭಿನ್ನಮತ ಸ್ಫೋಟಗೊಂಡಿತು. ಯಡಿಯೂರಪ್ಪ ಅವರನ್ನು ಪ್ರತ್ಯೇಕವಾಗಿ ತಾಲ್ಲೂಕಿಗೆ ಸ್ವಾಗತಿಸುವ ಸಲುವಾಗಿ ಹೊಳೆನರಸೀಪುರ ರಸ್ತೆಯಲ್ಲಿರುವ ಜಿಲ್ಲಾ ಪಂಚಾಯಿತಿ ಸದಸ್ಯರಾದ ರತ್ನಮ್ಮ ಲೋಕೇಶ್ ಅವರ ಮನೆ ಬಳಿ ಹಾಗೂ ಹಾಸನ ರಸ್ತೆಯಲ್ಲಿರುವ ಹೇಮಾವತಿ ರೆಸಾರ್ಟ್ ಬಳಿ ವ್ಯವಸ್ಥೆ ಮಾಡಿಕೊಂಡು, ಬಿಜೆಪಿ ಜಿಲ್ಲಾಧ್ಯಕ್ಷ ಯೋಗಾ ರಮೇಶ್ ಅವರ ವಿರುದ್ಧ ಮನವಿ ಸಲ್ಲಿಸುವ ಸಿದ್ಧತೆಯನ್ನು ಭಿನ್ನಮತೀಯ ಕಾರ್ಯಕರ್ತರು ನಡೆಸಿದ್ದರು. ಆದರೆ ಅದಕ್ಕೆ ಅವಕಾಶವಾಗಲಿಲ್ಲ.

ಬಿಜೆಪಿ ತಾಲ್ಲೂಕು ಘಟಕ ಆಯೋಜಿಸಿದ್ದ ತಾಲ್ಲೂಕು ಕ್ರೀಡಾಂಗಣಕ್ಕೆ ನೇರವಾಗಿ ಬಂದ ಯಡಿಯೂರಪ್ಪ ಅವರು, ವೇದಿಕೆ ಕಾರ್ಯಕ್ರಮ ಮುಗಿಸಿ ಹಿಂದಿರುಗುವ ವೇಳೆಗೆ ಇಲ್ಲಿನ ಕುವೆಂಪು ಪಾರ್ಕಿನ ಬಳಿ ಜಮಾಯಿಸಿದ ಸಾವಿರಾರು ಭಿನ್ನಮತೀಯರು, ಯೋಗಾ ರಮೇಶ್ ವಿರುದ್ಧ ಮೈಕಿನಲ್ಲಿ ಭಾಷಣ ಮಾಡಿ, ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಕಾರಿನಲ್ಲಿ ಬಂದ ಬಿಎಸ್‌ವೈ ಅವರ ಮುಂದಿನ ಪೊಲೀಸ್ ಕಾರನ್ನು ತಡೆದು ರಸ್ತೆಯಲ್ಲೇ ಕುಳಿತ ಜಿಲ್ಲಾ ಪಂಚಾಯಿತಿ ಸದಸ್ಯೆ ರತ್ನಮ್ಮ ಲೋಕೇಶ್, ಮುಖಂಡ ಲೋಕೇಶ್, ಎನ್.ರವಿಕುಮಾರ್, ಜಿಲ್ಲಾ ಬಿಜೆಪಿ ಮಾಜಿ ಸಂಘಟನಾ ಕಾರ್ಯದರ್ಶಿ ನಟೇಶ್ ಕುಮಾರ್, ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ಪಿ.ಟಿ. ಕೇಶವೇಗೌಡ ಸೇರಿದಂತೆ ಸಾವಿರಾರು ಕಾರ್ಯಕರ್ತರು ಕಾರನ್ನು ತಡೆದರು.

ಈ ವೇಳೆ ಹಿಂದಿನ ಕಾರಿನಲ್ಲಿದ್ದ ಶಾಸಕ ಸಿ.ಟಿ.ರವಿ ಅವರು ಪ್ರತಿಭಟನಾಕಾರರ ಬಳಿ ಬಂದಾಗ ನೂಕು ನುಗ್ಗಲು ಉಂಟಾಯಿತು. ಯೋಗಾ ರಮೇಶ್ ವಿರುದ್ಧ ಘೋಷಣೆ ಕೂಗುತ್ತಿದ್ದ ಭಿನ್ನಮತೀಯರ ಗುಂಪು ಅದೇ ಭರಾಟೆಯಲ್ಲಿ ಸಿ.ಟಿ.ರವಿ ವಿರುದ್ಧವೂ ಧಿಕ್ಕಾರದ ಘೋಷಣೆ ಕೂಗಿದರು. ಸಿ.ಟಿ. ರವಿ ನೂಕು ನುಗ್ಗಲಿನಲ್ಲಿ ಸಿಲುಕಿದರಾದರೂ ಪೊಲೀಸರು ಮಧ್ಯೆ ಪ್ರವೇಶಿಸಿ, ರವಿ ಅವರನ್ನು ಕಾರಿಗೆ ತೆರಳಲು ಅನುವು ಮಾಡಿಕೊಟ್ಟರು.

ಜಿ.ಪಂ. ಸದಸ್ಯೆ ರತ್ನಮ್ಮ ಲೋಕೇಶ್ ಅವರನ್ನು ಕಾರಿನ ಬಳಿಗೇ ಕರೆಸಿಕೊಂಡ ಯಡಿಯೂರಪ್ಪ ಅವರು, ಕಾರಿನಿಂದ ಇಳಿದು ಅವರಿಂದ ಮಾಲೆ ಹಾಕಿಸಿಕೊಂಡ ನಂತರ ಏನಮ್ಮಾ ಇದೆಲ್ಲಾ? ಎಂದಷ್ಟೇ ಪ್ರಶ್ನಿಸಿದರು. ರತ್ನಮ್ಮ ಲೋಕೇಶ್ ಮತ್ತು ಎನ್.ರವಿಕುಮಾರ್ ಅವರುಗಳು ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಪ್ರಯತ್ನಿಸಿದರಾದರೂ ಕೇಳುವ ಸ್ಥಿತಿಯಲ್ಲಿ ಬಿಎಸ್‌ವೈ ಇರಲಿಲ್ಲ. ಇದರಿಂದ ರತ್ನಮ್ಮ ತಮ್ಮ ಅಸಮಾಧಾನ ವ್ಯಕ್ತಪಡಿಸಿ ಹಿಂದಕ್ಕೆ ಬಂದರು.

ಪೊಲೀಸರು ಧರಣಿನಿರತ ಭಿನ್ನಮತೀಯರನ್ನು ಚದುರಿಸಿ ಬಿಎಸ್‌ವೈ ಕಾರು ಚಲಿಸಲು ಅನುವು ಮಾಡಿಕೊಟ್ಟರು. ಕಾರು ಮುಂದಕ್ಕೆ ಚಲಿಸುತ್ತಿದ್ದಾಗಲೂ ಕೆಲವರು ಮತ್ತೆ ಕಾರನ್ನು ಅಡ್ಡಗಟ್ಟಲು ಪ್ರಯತ್ನಿಸಿ ಮುಂದೆ ತೆರಳುತ್ತಿದ್ದಾಗ, ಪೊಲೀಸರು ಲಾಠಿ ಬೀಸಿ ಜನರನ್ನು ಚದುರಿಸಿದರು.

ಮೊದಲೇ ಪಕ್ಷದಲ್ಲಿನ ಗೊಂದಲಗಳ ಬಗ್ಗೆ ಸುಳಿವಿದ್ದ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಜಮಾವಣೆಗೊಂಡಿದ್ದು , ಬಂದೋಬಸ್ತ್ ಮಾಡಲಾಗಿತ್ತು.

▯ ಅರಕಲಗೂಡು ತಾ|| ಬಿಜೆಪಿ ಘಟಕದಲ್ಲಿ ಅಸಮಾಧಾನ ಸ್ಫೋಟ

▯ ಒಂದು ಗುಂಪಿನಿಂದ ಯಡಿಯೂರಪ್ಪ ಅವರಿಗೆ ಮನವಿ

▯ ಪಕ್ಷದ ಜಿಲ್ಲಾಧ್ಯಕ್ಷ ಯೋಗಾ ರಮೇಶ್ ವಿರುದ್ಧ ತೀವ್ರ ವಾಗ್ದಾಳಿ

▯ ಸಿ.ಟಿ.ರವಿ ವಿರುದ್ಧವೂ ಧಿಕ್ಕಾರ

▯ ಪೊಲೀಸರ ಮಧ್ಯ ಪ್ರವೇಶ

▯ ಗುಂಪು ಚದುರಿಸಲು ಪೊಲೀಸರ ಹರಸಾಹಸ

▯ ಲಾಠಿ ಬೀಸಿ ಕಾರ್ಯಕರ್ತರನ್ನು ಚದುರಿಸಿದ ಪೊಲೀಸರು

ಇತ್ತ ಅದ್ದೂರಿ ಸ್ವಾಗತ, ಮತ್ತೊಂದೆಡೆ ಪ್ರತಿಭಟನೆ

ಹಾಸನ : ನಗರದ ಹೊರವಲಯದಲ್ಲಿರುವ ತಟ್ಟೇಕೆರೆ ಗ್ರಾಮ ಶುಕ್ರವಾರ ಅದ್ದೂರಿ ಸ್ವಾಗತ ಮತ್ತು ಪ್ರತಿಭಟನೆಗೆ ಸಾಕ್ಷಿಯಾಯಿತು.

ಬರ ವೀಕ್ಷಣೆಯ ಹಿನ್ನೆಲೆಯಲ್ಲಿ ಪ್ರವಾಸ ಕೈಗೊಂಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಯಡಿಯೂರಪ್ಪ ತಟ್ಟೇಕೆರೆ ಗ್ರಾಮಕ್ಕೆ ಬೆಳಿಗ್ಗೆ 10.20ರ ಹೊತ್ತಿಗೆ ಆಗಮಿಸಿದರು.

ತಟ್ಟೇಕೆರೆ ಗ್ರಾಮದಲ್ಲಿ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು. ಇನ್ನು ಮೊದಲೇ ನಿಗದಿಪಡಿಸಿದ್ದ ಕಾರ್ಯಕ್ರಮದಂತೆ ದಲಿತ ಕುಟುಂಬದ ಮನೆಗೆ ಯಡಿಯೂರಪ್ಪ ತೆರಳಿದರು.

ಜಿಲ್ಲಾ ಪ್ರವಾಸ ಕೈಗೊಂಡಿರುವ ಅವರಿಗೆ ನಗರದಲ್ಲಿ ಮೊದಲ ಬಾರಿಗೆ ಕಪ್ಪು ಬಾವುಟ ಪ್ರದರ್ಶನದ ಮೂಲಕ ಸ್ವಾಗತ ಸಿಕ್ಕಿತು.

ಉಪಹಾರ ಸೇವನೆಗೆಂದು ನಗರದ ತಟ್ಟೆಕೆರೆ ಗ್ರಾಮಕ್ಕೆ ಆಗಮಿಸಿದಾಗ ದಲಿತ, ಪ್ರಗತಿಪರ ಹಾಗೂ ರೈತ ಸಂಘಟನೆಯ ಕಾರ್ಯಕರ್ತರು ಗ್ರಾಮದ ಪ್ರವೇಶ ದ್ವಾರದಲ್ಲಿಯೇ ಕಪ್ಪು ಬಾವುಟಗಳೊಂದಿಗೆ ಧಿಕ್ಕಾರಗಳನ್ನು ಕೂಗಿ ಪ್ರತಿಭಟಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ರೈತ ಮುಖಂಡ ಸ್ವಾಮಿಗೌಡ ಮಾತನಾಡುತ್ತಾ, ಯಡಿಯೂರಪ್ಪನವರು ತಮ್ಮ ಅಧಿಕಾರವಧಿಯಲ್ಲಿ ಜಾತಿವಾದಿ ಆಡಳಿತ ನಡೆಸಿ ಈಗ ದಲಿತರ ಓಟು ಕಸಿಯುವ ಸಲುವಾಗಿ ಉಪಹಾರದ ನಾಟಕವಾಡುತ್ತಿದ್ದಾರೆ. ಅವರಿಗೆ ನಿಜವಾಗಿಯೂ ದಲಿತರ ಬಗ್ಗೆ ಕಾಳಜಿಯಿದ್ದರೆ ದಲಿತರಿಗೆ ಸವರ್ಣೀಯರ ದೇವಾಲಯಗಳಿಗೆ ಪ್ರವೇಶ ಕೊಡಿಸಲಿ ಎಂದು ಸವಾಲು ಹಾಕಿದರು.

(-4ನೇ ಪುಟಕ್ಕೆ)

ಅಕ್ಕಿ ರೊಟ್ಟಿ ಸವಿದ ಯಡಿಯೂರಪ್ಪ

ತಟ್ಟೇಕೆರೆ ಗ್ರಾಮದ ಆಟೋ ಚಾಲಕ, ದಲಿತ ಪಂಗಡದ ಪ್ರಕಾಶ್ ಮನೆಗೆ ಯಡಿಯೂರಪ್ಪ ಅವರು ತೆರಳಿದಾಗ ಬೆಳಿಗ್ಗೆ 10 ಗಂಟೆ 40 ನಿಮಿಷವಾಗಿತ್ತು.

ಪುಟ್ಟ ಹೆಂಚಿನ ಮನೆಯಲ್ಲಿ ಪ್ರಕಾಶ್ ದಂಪತಿ ರಾಗಿ ರೊಟ್ಟಿ , ಹುಚ್ಚೆಳ್ಳು ಚಟ್ನಿ , ಅಕ್ಕಿ ರೊಟ್ಟಿ , ಕೆಂಪು ಮೆಣಸಿನಕಾಯಿ ಖಾರ ಹಾಗೂ ಅವರೆಕಾಳು ಉಪ್ಪಿಟ್ಟನ್ನು ತಯಾರಿಸಿದ್ದರು.

ಮನೆಯ ಅಕ್ಕ ಪಕ್ಕದಲ್ಲಿ ಭಾರೀ ಜನಜಂಗುಳಿಯೇ ನೆರೆದಿತ್ತು. ಪೊಲೀಸರು ಭದ್ರತೆ ಕೂಡ ಆಯೋಜಿಸಿದ್ದರು. ಆ ಪುಟ್ಟ ಮನೆಯೊಳಗೆ ಯಡಿಯೂರಪ್ಪ, ಶಾಸಕ ಸಿ.ಟಿ.ರವಿ, ಪಕ್ಷದ ಮುಖಂಡರು ತೆರಳಿದರು.

ದಲಿತ ದಂಪತಿಯ ಆತಿಥ್ಯವನ್ನು ಅವರು ಸ್ವೀಕರಿಸಿದರು. ಯಡಿಯೂರಪ್ಪ ಅವರು ಅಕ್ಕಿ ರೊಟ್ಟಿಯನ್ನು ತಿಂದರು. ಮೆಣಸಿನಕಾಯಿ ಚಟ್ನಿಯ ಸಹವಾಸಕ್ಕೆ ಹೋಗಲಿಲ್ಲ. ಇನ್ನುಳಿದವರು ರಾಗಿ ರೊಟ್ಟಿ ತಿಂದರು.

ನಂತರ ಯಡಿಯೂರಪ್ಪನವರು ಆ ದಲಿತ ಕುಟುಂಬದವರೊಂದಿಗೆ ಮಾತನಾಡಿದರು. ಈ ಬಡಾವಣೆಯಲ್ಲಿನ ಸಮಸ್ಯೆಗಳನ್ನು ಆಲಿಸಿದರು.

'ಘೋಷಣೆಗೆ ಇತಿಮಿತಿ ಬೇಕು'

ಘೋಷಣೆಗೆ ಇತಿಮಿತಿ ಬೇಕು. ಹೀಗೆ ಘೋಷಣೆ ಕೂಗುತ್ತಿದ್ದರೆ ನಾನು ಮಾತನಾಡುವುದಿಲ್ಲ ಎಂದು ಯಡಿಯೂರಪ್ಪ ಎಂದಿನಂತೆ ಸಿಡಿಮಿಡಿಗೊಂಡಿದ್ದೂ ನಡೆಯಿತು.

ತಟ್ಟೇಕೆರೆ ಗ್ರಾಮದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಯಡಿಯೂರಪ್ಪ ಭಾಷಣ ಮಾಡಲು ಆರಂಭಿಸುತ್ತಿದ್ದಂತೆಯೇ ಪ್ರೀತಂ ಗೌಡರ ಪರ ಅವರ ಅಭಿಮಾನಿಗಳು ಘೋಷಣೆಗಳನ್ನು ಮುಗಿಲು ಮುಟ್ಟಿಸಿದರು. ಎರಡು ಮೂರು ಬಾರಿ ಇದು ಪುನರಾವರ್ತನೆಯಾಯಿತು. ಆಗ ಯಡಿಯೂರಪ್ಪ, ಘೋಷಣೆಗೆ ಮಿತಿ ಬೇಕು ಎಂದು ಮಾತಿನ ಚಾಟಿ ಬೀಸಿದರು.

'ಸಾಲ ಮನ್ನಾ ಮಾಡಿ, ಇಲ್ಲ ಅಧಿಕಾರದಿಂದ ತೊಲಗಿ'

ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ರಾಜ್ಯ ಸರ್ಕಾರ ತಕ್ಷಣವೇ ಸಾಲ ಮನ್ನಾ ಮಾಡಬೇಕು. ಇದು ಸಾಧ್ಯವಾಗದಿದ್ದರೆ ಅಧಿಕಾರ ಬಿಟ್ಟು ತೊಲಗ ಬೇಕು ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಸರ್ಕಾರದ ವಿರುದ್ಧವಾಗ್ದಾಳಿ ನಡೆಸಿದರು.

ಜುಲೈ 7,8,9ರಂದು ಬೆಂಗಳೂರಿನಲ್ಲಿ ಸಾಲ ಮನ್ನಾಕ್ಕೆ ಒತ್ತಾಯಿಸಿ ಸತ್ಯಾಗ್ರಹ ನಡೆಸಲಾಗುವುದು. ಜು.10ರಂದು 4 ಲಕ್ಷ ರೈತರನ್ನು ಸೇರಿಸಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದರು.

'ಪುರುಷರಷ್ಟೇ ಮಹಿಳೆಯರಿಂದಲೂ ಸಾಧನೆ'

ಹಾಸನ : ಮಹಿಳೆಯರು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡುತ್ತಾರೆ. ಪುರುಷರಂತೆಯೇ ಸಾಧನೆ ಮಾಡುತ್ತಾರೆ ಎಂದು ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಶ್ವೇತಾ ದೇವರಾಜ್ ಅಭಿಪ್ರಾಯಪಟ್ಟರು.

ಹೊಳೆನರಸೀಪುರ ರಸ್ತೆಯಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣಾಭಿವೃದ್ಧಿ ಸ್ವ ಉದ್ಯೋಗ ತರಬೇತಿ ಸಂಸ್ಥೆ ಹಾಗೂ ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಶುಕ್ರವಾರ ನಡೆದ ಗ್ರಾಮೀಣ ಮಹಿಳೆಯರಿಗೆ ಗಾರೆ ಕೆಲಸ (ಮೇಸನ್) ತರಬೇತಿ ಕಾರ್ಯಕ್ರಮದ ಮುಕ್ತಾಯ ಸಮಾರಂಭದಲ್ಲಿ ಅವರು ಮಾತನಾಡಿ, ಈ ತರಬೇತಿ ಕಾರ್ಯಕ್ರಮದಿಂದ ಗ್ರಾಮೀಣ ಮಹಿಳೆಯರ ಸೃಜನಶೀಲತೆ ಹೊರಹೊಮ್ಮುವಂತೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು.

ಸುರಭಿ ಗ್ರಾಮೀಣಾಭಿವೃದ್ಧಿ ಸ್ವಯಂ ಸೇವಾ ಸಂಸ್ಥೆಯ ಪ್ರೀತಿ ಲೋಬೊ ಮತ್ತು ಕೆನರಾ ಬ್ಯಾಂಕ್‌ನ ರಂಗಸ್ವಾಮಿ ಅವರು ತಮ್ಮ ನಿಸ್ವಾರ್ಥ ಸೇವೆ ಮತ್ತು ಶ್ರಮದಿಂದ ಗ್ರಾಮೀಣ ಮಹಿಳೆಯರು ಸ್ವಾವಲಂಬಿಯಾಗಿ ತಮ್ಮ ಸ್ವಂತ ಕಾಲ ಮೇಲೆ ನಿಲ್ಲುವಂತೆ ಮಾಡಿರುವುದು ಶ್ಲಾಘನೀಯ ಎಂದರು.

30 ದಿನದಲ್ಲಿ ಮಹಿಳೆಯರು ಗಾರೆ ಕೆಲಸ ಕಲಿತು ಕೊಟ್ಟಿಗೆ, ಕೊಠಡಿ, ಶೌಚಾಲಯ, ಕಸದ ತೊಟ್ಟಿಯನ್ನು ಗುಣಮಟ್ಟದಿಂದ ಚೆನ್ನಾಗಿ ಕಟ್ಟಿದ್ದಾರೆ. ಇಲ್ಲಿ ತರಬೇತಿ ಪಡೆದ ಮಹಿಳೆಯರು ಇತರರಿಗೆ ಮಾದರಿಯಾಗಬೇಕೆಂದು ಕರೆ ನೀಡಿದರು.

ಜಿಲ್ಲಾ ಪಂಚಾಯಿತಿಯ ಯೋಜನಾ ನಿರ್ದೇಶಕ ಸಿದ್ದರಾಜು ಮಾತನಾಡಿ, ಜಿಲ್ಲೆಯಲ್ಲಿ ಶೌಚಾಲಯ ನಿರ್ಮಿಸಲು ಗಾರೆ ಕೆಲಸಗಾರರ ಕೊರತೆ ಇದೆ. ಆ ಕೊರತೆಯನ್ನು ನೀವು ನೀಗಿಸಬೇಕು ಎಂದು ಕಿವಿಮಾತು ಹೇಳಿದರು.

ದುರ್ಬಲರಿದ್ದರೆ ದೇವರು ಸಹ ಸಹಿಸಲ್ಲ. ಕೋಳಿ, ಕುರಿ ಬಲಿ ಕೊಡ್ತೀವಿ. ಹುಲಿ, ಸಿಂಹ ಬಲಿ ಕೊಡಲ್ಲ. ಏಕೆಂದರೆ ಅವು ಬಲಿಷ್ಠವಾಗಿವೆ. ಹೀಗಾಗಿ ನೀವು ಆರ್ಥಿಕವಾಗಿ ಸದೃಢವಾದರೆ ಶೈಕ್ಷಣಿಕವಾಗಿ ಉತ್ತಮ ಜೀವನ ನಡೆಸಬಹುದು. ನೀವು ಆರ್ಥಿಕವಾಗಿ ಬಲಿಷ್ಠರಾಗಬೇಕು ಎಂದರು.

(-4ನೇ ಪುಟಕ್ಕೆ)

ಚಿರತೆ ಪ್ರತ್ಯಕ್ಷ : ಭೀತಿಗೊಂಡ ಗ್ರಾಮಸ್ಥರು

ಕೊಣನೂರು ಹೋಬಳಿಯ ಅಕ್ಕಲವಾಡಿ ಗ್ರಾಮದ ಬೆಟ್ಟದ ಬಳಿ ಕಳೆದ ರಾತ್ರಿ ಚಿರತೆಯ ಹೆಜ್ಜೆ ಗುರುತು.

ಕೊಣನೂರು: ಹೋಬಳಿಯ ಅಕ್ಕಲವಾಡಿ ಗ್ರಾಮದ ಬೆಟ್ಟದ ಬಳಿ ಗುರುವಾರ ರಾತ್ರಿ ಚಿರತೆ ಪ್ರತ್ಯಕ್ಷವಾದ ಘಟನೆ ಬೆಳಕಿಗೆ ಬಂದಿದ್ದು, ಗ್ರಾಮದ ತಿಮ್ಮಣ್ಣ ಎಂಬುವವರಿಗೆ ಸೇರಿದ ಕರುವೊಂದನ್ನು ಚಿರತೆ ಎಳೆದುಕೊಂಡು ಹೋಗಿರುವ ಹೆಜ್ಜೆ ಗುರುತು ನೆಲದಲ್ಲಿ ಕಂಡಿದೆ.

ಈ ಭಾಗದಲ್ಲಿ ಇತ್ತೀಚೆಗೆ ಚಿರತೆಯ ಹಾವಳಿ ಹೆಚ್ಚಾಗಿದ್ದು, ಅಹಿತಕರ ಘಟನೆಗಳು ಸಂಭವಿಸುವ ಮೊದಲು ಇದರ ಬಗ್ಗೆ ಅರಣ್ಯ ಇಲಾಖೆಯವರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸುತ್ತಮುತ್ತಲ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸ್ಥಳಕ್ಕೆ ಅರಣ್ಯ ಇಲಾಖೆಯ ರಾಘವೇಂದ್ರ, ನಾಗೇಶ್ ತೆರಳಿ ಪರಿಶೀಲಿಸಿದ್ದು, ಅಲ್ಲಿದ್ದ ಹೆಜ್ಜೆ ಗುರುತುಗಳು ಚಿರತೆಯದೇ ಎಂದು ಧೃಡಪಡಿಸಿದ್ದಾರೆ. ಚಿರತೆಯು ಬೆಟ್ಟದ ಮೇಲಕ್ಕೆ ಹೋಗಿರಬಹುದು, ಅದು ಒಂದೇ ಜಾಗದಲ್ಲಿ ಇರುವುದಿಲ್ಲ. ಆಹಾರಕ್ಕಾಗಿ ಅಲೆದಾಡುತ್ತಿರುತ್ತದೆ. ಹೀಗಾಗಿ ಸುತ್ತಮುತ್ತಲ ಗ್ರಾಮಗಳಲ್ಲಿ ಕಂಡರೆ ತಕ್ಷಣ ಅರಣ್ಯ ಇಲಾಖೆಗೆ ತಿಳಿಸುವಂತೆ ಸೂಚಿಸಿದರು.


ಸರಳ ಸಜ್ಜನಿಕೆಯ ಸಾಕಾರ ಮೂರ್ತಿ,
ಜನಪರ ಕಾಳಜಿಯ ಕಾಂಗ್ರೆಸ್ ಮುಖಂಡ,
ಹಾಸನ ವಿಧಾನಸಭಾ ಕ್ಷೇತ್ರದ
ಹೆಚ್.ಕೆ.ಮಹೇಶ್ ಅವರಿಗೆ
ಹುಟ್ಟು ಹಬ್ಬದ ಶುಭಾಶಯಗಳು

ಎನ್.ಜಿ.ಜಗದೀಶ್
ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ
ಕಾಂಗ್ರೆಸ್ ಮುಖಂಡರು, ಶಂಕರನಹಳ್ಳಿ, ಹಾಸನ